

# ಕಾಲಗರ್ಭದೊಳಗಿನ ಎಟಿಎಂ

ಸಾವಿರಾರು ವರ್ಷಗಳ ಹಿಂದೆ ನರಬಲಿಗೆ ಒಳಗಾದ ನತದೃಷ್ಟರ ಅಸ್ಥಿಪಂಜರಗಳನ್ನು ಒಳಗೊಂಡಿರುವ ಗುಹೆಯೇ ‘ಎಟಿಎಂ’.

■ ಚೈತ್ರಿಕಾ ನಾಯ್ಕ ಹರ್ಗಿ

‘ಅಕ್ಟುನ್ ಟ್ಯುನುಕಲ್ ಮುಕ್ನಾಲ್’ ಅಂದರೆ ಸಂಕ್ಷಿಪ್ತವಾಗಿ ಎ.ಟಿ.ಎಂ. ಇದ್ಯಾವುದೋ ಹಣ ಠೇವಣಿ ಇಡುವ, ವರ್ಗಾವಣೆ ಮಾಡುವ, ಕಾರ್ಡ್ ಉಜ್ಜಿ ಹಣ ತೆಗೆಯುವ ಎಟಿಎಂ ಅಲ್ಲ. ಸಾವಿರಾರು ವರ್ಷಗಳ ಹಿಂದೆ ನರಬಲಿಗೆ ಒಳಗಾದವರ ಅಸ್ಥಿಪಂಜರಗಳನ್ನು ಗರ್ಭದಲ್ಲಿ ಇರಿಸಿಕೊಂಡಿರುವ ಗುಹೆ.

ಜುಳು ಜುಳು ಹರಿಯುವ ನದಿ, ಸುತ್ತಲೂ ಕಾಡು. ನದಿಯ ಪಕ್ಕ ವಾಹನ ನಿಲ್ಲಿಸಿ. ನದಿ ದಾಟಿ, ಸವೆದ ಕಾಡಿನ ಕಾಲುದಾರಿಗುಂಟ ಏರು ಹಾದಿಯಲ್ಲಿ ಸಾಗಿದರೆ ಮತ್ತೆ ಸಿಗುವ ಅದೇ ನದಿಯನ್ನು ಹಾಯ್ದು ಮತ್ತಷ್ಟು ಹೆಜ್ಜೆ ಹಾಕಿ, ಮತ್ತದೇ ನದಿಯ ಮೇಲ್ಮುಖವಾಗಿ ಹೋದರೆ ಮಾಯಾ ನಾಗರಿಕತೆಗೆ ಸೇರಿದ ಗುಹೆಯ ಬಾಯಿಗೆ ಹೋಗಿ ನಿಲ್ಲುತ್ತೀರಿ. ನರಬಲಿಗೆ ಸಾಕ್ಷಿಯಾದ ಈ ಗುಹೆ ಇರುವುದು ಬೆಲಿಝ್ ದೇಶದ ಕೆಯೊ ಜಿಲ್ಲೆಯಲ್ಲಿ. 1200 ವರ್ಷಗಳಷ್ಟು ಹಳೆಯದಾದ ಅಸ್ಥಿಪಂಜರಗಳು, ಸೆರಾಮಿಕ್ಸ್ ಪಾತ್ರೆ ಪಗಡೆಗಳು, ಮಡಿಕೆ ಕುಡಿಕೆಗಳು, ನರಬಲಿಗೆ–ರಕ್ತತರ್ಪಣಕ್ಕೆ ಬೇಕಾದ ಚೂಪಾದ ಆಯುಧಗಳ ನಿಗೂಢ ಜಗತ್ತನ್ನು ಗುಹೆ ಅಡಗಿಸಿಕೊಂಡಿದೆ.

ಗುಹೆಯ ಬಾಯಿಂದ ಒಳಗೆ ಹೋದರೆ ಬರಿ ಕತ್ತಲೆ. ಎದೆ ಮಟ್ಟದವರೆಗೆ ನೀರು. ಒಬ್ಬರೇ ಬಗ್ಗಿ ಹೋಗಬಹುದಾದ ಜಾಗ. ಮಾಯಾದೇವಿ ‘ಜಲದೇವತೆ’ ಎಂಬ ನಂಬಿಕೆ ಮಾಯನ್ನರಲ್ಲಿ ಇದ್ದಿದ್ದರಿಂದ, ಈ ನೀರು ಆವರಿಸಿರುವ ಗುಹೆಯಲ್ಲಿ ದೇವರಿಗೆ ಬಲಿಯನ್ನು ನೀಡುತ್ತಿದ್ದರು ಎಂದು ಹೇಳಲಾಗಿದೆ. ತಲೆಗೊಂದು ಹೆಲ್ಮೆಟ್ ಮತ್ತು ಲೈಟ್ ಕಟ್ಟಿ ಮುಂದೆ ಮುಂದೆ ಸಾಗಿದರೆ, ಗುಹೆ ಬಾಯಿ ಅಗಲಿಸಿದ ಜಾಗದಲ್ಲಿ ಸೂರ್ಯ ಕಿರಣಗಳು ಕಾಣುತ್ತವೆ. ಆ ಜಾಗ ಎರಡು ಫುಟ್‌ಬಾಲ್ ಮೈದಾನದಷ್ಟು ದೊಡ್ಡದಾಗಿದೆ. ಕತ್ತೆತ್ತಿ ಮೇಲೆ ನೋಡಿದರೆ ಸಲಾಕೆಯಂತೆ ಚೂಪು ಚೂಪು ಕಲ್ಲುಗಳು. ಆ ತುದಿಗಳಿಂದ ಮಂಜುಗಟ್ಟಿದ ನೀರ ಹನಿಗಳು ಗುಹೆಯ ಘೋರ ನಿಶ್ಶಬ್ದವನ್ನು ಕೆಣಕುವಂತೆ ಫಟ್ ಫಟ್ ಎಂದು ತೊಟ್ಟಿಕ್ಕುತ್ತಿರುತ್ತವೆ. ಅದೇ ಶಬ್ದ ಪ್ರತಿಫಲಿಸಿ ಮತ್ತೆ ಕಿವಿಗೆ ಬಂದು ತಟ್ಟುವ ಸದ್ದು ಭೂಮಿಯಾಚೆಗಿನ ಹೊಸ ಲೋಕದ ಸಂಚಾರಕ್ಕೆ ಹೋದಂತೆ. ಬ್ಯಾಟರಿ ಆಫ್ ಮಾಡಿ, ಕಣ್ಣು ಮುಚ್ಚಿ ನಿಂತರೆ ಸ್ಮಶಾನ ಮೌನದ ನಿಜ ದರ್ಶನ.



ಬದುಕಿನಾಚೆಗಿನ ಕಲ್ಪಿತ ಅನುಭವಗಳನ್ನು ಜೀವತದಲ್ಲೇ ಕಾಣುವ ಹುಚ್ಚು ಹತ್ತಿಸಿಕೊಂಡವರಿಗೆ ಇದು ಕಾಲಗರ್ಭದ ನೆಚ್ಚಿನ ತಾಣ. ಗುಹೆಯ ಬಯಲನ್ನು ದಾಟಿದ ನಂತರ ಸಿಗುವುದು ಬಲಿಪೀಠ. ಮಾಯಾದೇವಿಗೆ ಪ್ರಾಣಾರ್ಪಣೆ ಮಾಡುವ ಜಾಗ ಇದು. 10 ಅಡಿ ಎತ್ತರ, 8 ಅಡಿ ಅಗಲವಾದ ಸಣ್ಣ ಕೋಣೆ. ತನ್ನನ್ನು ಮಾಯಾದೇವಿಗೆ ಅರ್ಪಣೆ ಮಾಡಿಕೊಂಡು ಹಿಂದಕ್ಕೆ ಬಿದ್ದು ಪ್ರಾಣ ಬಿಟ್ಟ ತರುಣನೊಬ್ಬನ ಪೂರ್ಣ ಅಸ್ಥಿಪಂಜರ ಇನ್ನೂ ಇಲ್ಲಿ ಅಂಗಾತ ಮಲಗಿದೆ. ಈವರೆಗೆ ಹೆಣ್ಣಿನ ಅಸ್ಥಿಪಂಜರ ಎಂದುಕೊಳ್ಳಲಾಗಿತ್ತು. ಆದರೆ ಇತ್ತೀಚಿನ ಅಧ್ಯಯನದ ಪ್ರಕಾರ ಇದು 17 ವಯಸ್ಸಿನ ಗಂಡಿನ ಅಸ್ಥಿಪಂಜರ. 1200 ವರ್ಷಗಳಿಂದ ಈ ಅಸ್ಥಿಪಂಜರ ಇಲ್ಲೇ ಇದ್ದು ಇದನ್ನು **The Crystal Maiden** ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಇನ್ನೂ 14 ಜನರ ಅಸ್ಥಿಪಂಜರದ ಭಾಗಗಳು ಅಲ್ಲಿವೆ.

ಉತ್ಖನನ, ಪುರಾತತ್ವಶಾಸ್ತ್ರ ಇತಿಹಾಸ, ಗುಹೆ ಅಧ್ಯಯನ ಮಾಡುವವರಿಗೆ ಪ್ರಿಯ ಜಾಗ ಇದು. ತಜ್ಞರ ಪ್ರಕಾರ ಯುದ್ಧದಲ್ಲಿ ಸೆರೆಯಾದ, ಕುಲೀನರು ಎಂದು ಕರೆಯಲಾಗುತ್ತಿದ್ದ ಜನರನ್ನು ಇಲ್ಲಿ ನರಬಲಿ ಕೊಡಲಾಗುತ್ತಿತ್ತು. ಸಾಮಾಜಿಕವಾಗಿ ಕೆಳಸ್ತರದವರನ್ನು ಕೂಲಿಯಾಳಾಗಿ ಇರಿಸಿಕೊಳ್ಳಲಾಗುತ್ತಿತ್ತು. ಶತ್ರು ರಾಜನನ್ನು ನರಬಲಿ ನೀಡುವುದು ಶ್ರೇಷ್ಠ, ಅದರಲ್ಲೂ ಜೀವಂತ ಮನುಷ್ಯನ ಬಡಿಯುವ ಹೃದಯವನ್ನು ದೇವರ ಪ್ರಸಾದವಾಗಿ ಅರ್ಪಿಸುವುದು ಇನ್ನೂ ಶ್ರೇಷ್ಠ ಎಂದು ಭಾವಿಸಲಾಗಿತ್ತು. ರಕ್ತ, ಬೆರಳು, ಶಿಶ್ನ, ಕಿವಿ, ಮೂಗು, ತುಟಿಯನ್ನು ಕತ್ತರಿಸಿ ಮಾಯನ್ನರು ದೇವತೆಗಳಿಗೆ ಅರ್ಪಿಸುತ್ತಿದ್ದುದ್ದಕ್ಕೆ ಅಲ್ಲಿ ಸಿಗುವ ಹರಿತ ಆಯುಧಗಳು ಸಾಕ್ಷಿ. ಕೃಷಿಯನ್ನು ಅವಲಂಬಿಸಿದ್ದ ಮಾಯನ್ ನಾಗರಿಕತೆಯ ಜನ ನರಬಲಿ ಸಂಸ್ಕೃತಿಗೆ ಒಗ್ಗಿಕೊಂಡಿದ್ದರು. ದೊಡ್ಡ ಪಲ್ಲಟದ ನಂತರ ಆ ಸಂಸ್ಕೃತಿ ನಶಿಸಿದ್ದು ಇನ್ನೂ ನಿಗೂಢ ಮತ್ತು ಕುತೂಹಲಕರ.

ಪ್ರತಿಕ್ರಿಯಿಸಿ: feedback@sudha.co.in